ಕರ್ನಾಟಕ ಸರ್ಕಾರ

# ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ

## 2016 ನೇ ಸಾಲಿನ ವಾರ್ಷಿಕ ವರದಿ 24

# ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ

## 2016 ನೇ ಸಾಲಿನ ವಾರ್ಷಿಕ ವರದಿ

# ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ 2016 ನೇ ಸಾಲಿನ ವಾರ್ಷಿಕ ವರದಿ

## 1. ಹಿನ್ನೆಲೆ:

1.1 ಪೊಲೀಸ್ ಸುಧಾರಣೆಗಳ ಕುರಿತು ರಿಟ್ ಅರ್ಜಿ (ಸಿವಿಲ್) 1996 ರ ಸಂಖ್ಯೆ:310 ರಲ್ಲಿ ಭಾರತದ ಸರ್ವೋಚ್ಛ ನ್ಯಾಯಾಲಯದ ತೀರ್ಪಿನಲ್ಲಿರುವ ಆರನೆಯ ನಿರ್ದೇಶನದಂತೆ (ಅನುಭಂದ–I) ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರ ಹಾಗೂ ರಾಜ್ಯ ಮಟ್ಟದಲ್ಲಿ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರಗಳನ್ನು ರಚಿಸಲಾಗಿದೆ.

1.2 ಪರಿಷ್ಕೃತ ಕರ್ನಾಟಕ ಪೊಲೀಸ್ ಅಧಿನಿಯಮ, 1963 ರ ಕಲಂ 20ಸಿ, 20ಡಿ ಮತ್ತು 20ಇ ಪೊಲೀಸ್ ದೂರುಗಳ ಪ್ರಾಧಿಕಾರಗಳಿಗೆ ಸಂಬಂಧಪಟ್ಟಿರುತ್ತದೆ. ಕರ್ನಾಟಕ ಸರ್ಕಾರ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ ಮತ್ತು ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಗಳ ರಚನೆಯನ್ನು ವಿವರಿಸುತ್ತಾ ಅಧಿಸೂಚನೆ ಸಂಖ್ಯೆ: HD 208 POSAE 2012, ದಿನಾಂಕ 04.09.2012 ನ್ನು ಹೊರಡಿಸಿದ್ದರೂ ಸಹ ಪ್ರಸಕ್ತ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ ಸೆಪ್ಟೆಂಬರ್ 2013 ರಲ್ಲಿ ಅಸ್ತಿತ್ವದಲ್ಲಿ ಬಂದಿರುತ್ತದೆ. *(ಅಧಿನಿಯಮದಲ್ಲಿರುವ ಪೊಲೀಸ್ ದೂರುಗಳ ಪ್ರಾಧಿಕಾರಗಳಿಗೆ ಸಂಬಂಧಪಟ್ಟ ಪ್ರಾವಧಾನಗಳು ಅನುಬಂಧ II ರಲ್ಲಿ ಹಾಗೆಯೇ ಮನರಾವೃತ್ತಿಗೊಂಡಿರುತ್ತದೆ)*

1.3 ಕರ್ನಾಟಕ ಪೊಲೀಸ್ ಅಧಿನಿಯಮ ತಿದ್ದುಪಡಿ 20ಪಿ ಪ್ರಕಾರ ರಾಜ್ಯ ಪೊಲೀಸ್ ದೂರು ಪ್ರಾಧಿಕಾರಕ್ಕೆ ಉಚ್ಛನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು ಅಧ್ಯಕ್ಷರಾಗಿದ್ದು ಪ್ರಧಾನ ಕಾರ್ಯದರ್ಶಿ ಅಥವಾ ಅದಕ್ಕಿಂತ ಹೆಚ್ಚಿನ ಮಟ್ಟದ ನಿವೃತ್ತ ಸರ್ಕಾರೀ ಅಧಿಕಾರಿಯೊಬ್ಬರು ನಾಗರೀಕ ಸೇವಾ ಸದಸ್ಯರಾಗಿರುತ್ತಾರೆ. ಸಮಾಜ ಸೇವಾಸಕ್ತ ನಾಗರೀಕರೊಬ್ಬರು ಸದಸ್ಯರಾಗಿರುತ್ತಾರೆ. ಹಿರಿಯ ಸೇವಾನಿರತ ಮಹಿಳಾ ಪೊಲೀಸ್ ಅಧಿಕಾರಿ ಸದಸ್ಯರು ಹಾಗೂ ಪೊಲೀಸ್ ಇಲಾಖೆಯ ಸಾರ್ವಜನಿಕ ಕುಂದುಕೊರತೆ ಹಾಗೂ ಮಾನವ ಹಕ್ಕುಗಳ ವಿಭಾಗದ ಎಡಿಜಿಪಿ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.

**2. ಅಧ್ಯಕ್ಷರು ಹಾಗೂ ಸದಸ್ಯರು:**

2016ನೇ ಸಾಲಿನಲ್ಲಿ ಅಧ್ಯಕ್ಷರು ಹಾಗೂ ಸದಸ್ಯರ ಸ್ಥಾನದಲ್ಲಿದ್ದವರ ವಿವರಗಳು:

| ಕ್ರ ಸಂ | ಪದನಾಮ | ವರ್ಗ | ಹುದ್ದೆಯಲ್ಲಿರುವವರ ಹೆಸರು | ಅವಧಿ | ಸರ್ಕಾರದ ಆದೇಶ ಸಂಖ್ಯೆ ಮತ್ತು ದಿನಾಂಕ |
|---|---|---|---|---|---|
| 1 | ಅಧ್ಯಕ್ಷರು | ಉಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು | ಶ್ರೀ ಎಂ.ಪಿ. ಚಿನ್ನಪ್ಪ, ಕರ್ನಾಟಕ ಉಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು<br><br>ಶ್ರೀ ಎ.ಎಸ್ ಪಾಚ್ಛಾಪುರೆ, ಕರ್ನಾಟಕ ಉಚ್ಛ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರು | 02.09.2013 ರಿಂದ 01.09.2016<br><br>28.09.2016 ರಿಂದ | ಹೆಚ್‌ಡಿ 208 ಪೊಸೇಅ 2012 ದಿನಾಂಕ ಜುಲೈ 24, 2013<br>ಹೆಚ್‌ಡಿ 165 ಮೊಸಿಅ 2016 ದಿನಾಂಕ 19–09–2016 |
| 2 | ಸದಸ್ಯರು | ನಾಗರಿಕ ಸೇವೆಯಿಂದ ನಿವೃತ್ತ ಅಧಿಕಾರಿ | ಶ್ರೀ ಅಭಯ್ ಪ್ರಕಾಶ್, ಕರ್ನಾಟಕ ಸರ್ಕಾರದ ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು.<br><br>ಶ್ರೀ ಎಂ.ಆರ್.ಕಾಂಬಳೆ, ಕರ್ನಾಟಕ ಸರ್ಕಾರದ ನಿವೃತ್ತ ಅಪರ ಮುಖ್ಯ ಕಾರ್ಯದರ್ಶಿ | 05.09.2013 ರಿಂದ 03.09.2016 ರವರೆಗೆ<br><br>22.09.2016 ರಿಂದ | ಹೆಚ್‌ಡಿ 41 ಮೊಸೇಅ 2013 ದಿನಾಂಕ ಸೆಪ್ಟೆಂಬರ್ 4, 2013<br><br>ಹೆಚ್‌ಡಿ 165 ಮೊಸಿಆ 2016 (P1)ದಿನಾಂಕ ಸೆಪ್ಟೆಂಬರ್ 21, 2016 |
| 3 | ಸದಸ್ಯರು | ನಾಗರಿಕ ಸಮಾಜದಿಂದ | ಡಾ॥ ಸುದರ್ಶನ್ ಹೆಚ್. ಬಲ್ಲಾಳ್, ಮಣಿಪಾಲ್ ಆಸ್ಪತ್ರೆ, ಬೆಂಗಳೂರು | 13.06.2014 ರಿಂದ | ಹೆಚ್‌ಡಿ 41 ಮೊಸೇಅ 2013 ದಿನಾಂಕ ಮೇ 27, 2014 |
| 4 | ಸದಸ್ಯರು | ಮಹಿಳಾ ಐ.ಪಿ.ಎಸ್ ಅಧಿಕಾರಿ | ಶ್ರೀಮತಿ ಮಾಲಿನಿ ಕೃಷ್ಣಮೂರ್ತಿ, ಐ.ಪಿ.ಎಸ್, ಆರಕ್ಷಕ ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ ಮೀಸಲು ಪೊಲೀಸ್. | 04.09.2013 ರಿಂದ | ಹೆಚ್‌ಡಿ 41 ಮೊಸೇಅ 2013 ದಿನಾಂಕ ಸೆಪ್ಟೆಂಬರ್ 4, 2013 |
| 5 | ಸದಸ್ಯರು ಹಾಗೂ ಸದಸ್ಯ–ಕಾರ್ಯದರ್ಶಿ | ಪದನಿಮಿತ್ತ ಸದಸ್ಯರು ಹಾಗೂ ಸದಸ್ಯ–ಕಾರ್ಯದರ್ಶಿ | ಶ್ರೀ ಸಂಜಯ್ ಸಹಾಯ್, ಐ.ಪಿ.ಎಸ್, ಅಪರ ಪೊಲೀಸ್ ಮಹಾ ನಿರ್ದೇಶಕರು (ಕುಂದು ಕೊರತೆ ಮತ್ತು ಮಾನವ ಹಕ್ಕುಗಳು) | 05.02.2015 ರಿಂದ | ಹೆಚ್‌ಡಿ 16 ಮೊಸೇಇ 2015 ದಿನಾಂಕ ಫೆಬ್ರವರಿ 05, 2015 |

## 3. ಮೂಲಸೌಲಭ್ಯ, ಸಿಬ್ಬಂದಿ ಮತ್ತು ನಿಧಿ:

### 3.1 ಕಛೇರಿ ಸ್ಥಳ:

ಕರ್ನಾಟಕ ರಾಜ್ಯ ಪೊಲೀಸ್ ದೂರಗಳ ಪ್ರಾಧಿಕಾರದ ಮುಖ್ಯ ಕಛೇರಿ ಬೆಂಗಳೂರಿನ ಡಾ॥ ಬಿ.ಆರ್. ಅಂಬೇಡ್ಕರ್ ವೀಧಿಯಲ್ಲಿರುವ ವಿಕಾಸಸೌಧದ ಕೊಠಡಿ ಸಂಖ್ಯೆ 31 ಮತ್ತು 32, ಕೊಠಡಿ ಸಂಖ್ಯೆ 36 ಮತ್ತು 37ಗಳಲ್ಲಿ ನೆಲೆಗೊಂಡಿರುತ್ತದೆ.

### 3.2 ಸಿಬ್ಬಂದಿ :

3.2.1 ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 16 ಇಎಫ್‌ಎಸ್ 2013, ದಿನಾಂಕ 20.12.2013 ರನ್ವಯ ಕೆಳಗಿನಂತೆ ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.:-

| ಶಾಖೆ | ಪದನಾಮ | ಹುದ್ದೆಗಳ ಸಂಖ್ಯೆ |
|---|---|---|
| (1) | (2) | (3) |
| ಅಧ್ಯಕ್ಷರವರ ಆಪ್ತ ಶಾಖೆ | ಆಪ್ತ ಕಾರ್ಯದರ್ಶಿ | 1 |
| | ಶಾಖಾಧಿಕಾರಿ | 1 |
| | ಶೀಘ್ರಲಿಪಿಗಾರರು | 1 |
| | ಸಹಾಯಕ / ಕಿರಿಯ ಸಹಾಯಕ | 1 |
| | ವಾಹನ ಚಾಲಕರು | 1 |
| ಸದಸ್ಯರವರ ಆಪ್ತ ಶಾಖೆ (2) | ಆಪ್ತ ಸಹಾಯಕ / ಶೀಘ್ರಲಿಪಿಗಾರರು | 2 |
| | ಸಹಾಯಕ | 2 |
| | ವಾಹನ ಚಾಲಕ (ಒಬ್ಬ ಸದಸ್ಯರಿಗೆ ಮಾತ್ರ) | 1 |
| ಆಡಳಿತ ಶಾಖೆ | ಅಧೀನ ಕಾರ್ಯದರ್ಶಿ* | 1 |
| | ಶಾಖಾಧಿಕಾರಿ | 1 |
| | ಸಹಾಯಕ | 1 |
| ನ್ಯಾಯಾಲಯ ಕಾರ್ಯ | ಬೆಂಚ್ ಕ್ಲರ್ಕ್ | 1 |
| | ಬೆರಳಚ್ಚುಗಾರರು | 2 |
| | ದಲಾಯತ್‌ಗಳ ಹಾಗೂ ಕಂಪ್ಯೂಟರ್ ಆಪರೇಟರ್ ನ ಸೇವೆಗಳನ್ನು ಸೇವಾ ಕರಾರಿನ ಮೇಲೆ ತೆಗೆದುಕೊಳ್ಳಬಹುದು. | |
| | ಒಟ್ಟು | 16 |

* ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 300 ಸಉಸೇ 2014, ದಿನಾಂಕ 29.04.2015 ರನ್ವಯ ಅಧೀನ ಕಾರ್ಯದರ್ಶಿ ಹುದ್ದೆಯನ್ನು ಉಪ ಕಾರ್ಯದರ್ಶಿ ಹುದ್ದೆಯಾಗಿ ಉನ್ನತೀಕರಿಸಲಾಗಿದೆ.

3.2.2 ವರ್ಷ 2016 ನಲ್ಲಿ ವಿವಿಧ ಹುದ್ದೆಗಳಲ್ಲಿರುವ ಸಿಬ್ಬಂದಿಗಳ ವಿವರ ಈ ಕೆಳಗಿನಂತಿದೆ:-

| ಕ್ರ ಸಂ | ಪದನಾಮ | ಸಿಬ್ಬಂದಿಯ ಹೆಸರು | ಅವಧಿ |
|---|---|---|---|
| 1 | ಅಧೀನ ಕಾರ್ಯದರ್ಶಿ / ಉಪ ಕಾರ್ಯದರ್ಶಿ<br><br>ಅಧೀನ ಕಾರ್ಯದರ್ಶಿ | ಎಸ್.ಬಿ.ಪಟಗಾರ್<br><br>ಮಲ್ಲಿಕಾರ್ಜುನ | 10.04.2015 ರಿಂದ 30.09.2016 ರಂದು ನಿವೃತ್ತಿ<br><br>09.11.2016 ರಿಂದ |
| 2 | ಶಾಖಾಧಿಕಾರಿ | ಎಸ್.ಹೆಚ್.ಶಿವಶೇಖರ | 01.09.2014 ರಿಂದ 02.09.2016 |
| 3 | ಸದಸ್ಯರ ಆಪ್ತ ಸಹಾಯಕ | ವಿ.ಪುರುಷೋತ್ತಮಯ್ಯ | 16.05.2015 ರಿಂದ |
| 4 | ಪ್ರಥಮ ದರ್ಜೆ ಸಹಾಯಕ | ಪ್ರವೀಣ್ ಕುಮಾರ್ .ಎಸ್ | 26.12.2015 ರಿಂದ 11.08.2016 |
| 5 | ಸಹಾಯಕ | ಗಿರೀಶ್ ಬಿ.ಎಂ. | 30.04.2016 ರಿಂದ |
| 6 | ಸಹಾಯಕ | ರಾಜೇಶ್ವರಿ ಎಸ್. | 27.04.2016 ರಿಂದ |

| | | | |
|---|---|---|---|
| 7 | ಶೀಘ್ರಲಿಪಿಗಾರರು | ಬಿ.ಪಿ. ಶಂಕರ್ ನಾರಾಯಣ | 23.05.2016 ರಿಂದ |
| 8 | ಶಾಖಾಧಿಕಾರಿ | ಮಾಧವಿ | 06.01.2016 ರಿಂದ |
| 9 | ಕಂಪ್ಯೂಟರ್ ಆಪರೇಟರ್ | ಎಸ್.ಭಾರತಿ | 02.02.2015 ರಿಂದ |
| 10 | ವಾಹನ ಚಾಲಕ<br><br>ವಾಹನ ಚಾಲಕ | ಮಲ್ಲಿಕಾರ್ಜುನ ಹುಗಾರ್<br><br>ಗಜೇಂದ್ರ ಎನ್. ಬೊಂಗಾಳೆ | 10.10.2014 ರಿಂದ 01.09.2016<br><br>13.10.2016 ರಿಂದ |
| 11 | | ಐ.ಎನ್.ರಮೇಶ್<br><br>ಮಹಾಂತೇಶ್ ವಿ. ಕುಸುಗಲ್ | 16.04.2015 ರಿಂದ 03.09.2016<br><br>09.11.2016 ರಿಂದ |
| 11 | ಮೋಟರ್ ಸೈಕಲ್ ಚಾಲಕರು | ಬಲರಾಮ್ | 24.12.2014 ರಿಂದ |
| 12 | ದಲಾಯತ್ | 1. ಎಸ್.ಶ್ರೀಹರಿ<br>2. ಕುಮಾರಸ್ವಾಮಿ<br>3. ಬಿ. ಮೋಹನ್‌ಸಿಂಗ್ | 11.09.2013 ರಿಂದ<br>01.08.2015 ರಿಂದ<br>03.10.2016 ರಿಂದ |
| 13 | ಶೀಘ್ರಲಿಪಿಗಾರರು | ನಜ್ಮಾ ಹುಲ್ಲೂರ | 02.10.2016 ರಿಂದ |
| 14 | ಬೆರಳಚ್ಚುಗಾರರು | ವಿ.ಎಸ್. ದೀಪಿಕ | 23.06.2014 ರಿಂದ |
| 15 | ಅಂಗರಕ್ಷಕ | ಸುಭಾಷ್ ಟೊಣ್ಣೆ | 18.11.2016 ರಿಂದ |

3.3 ಆಯವ್ಯಯ ಅನುದಾನ:

3.3.1 ರಾಜ್ಯ ಆಯವ್ಯಯದಲ್ಲಿ 2016-17ನೇ ವಿತ್ತೀಯ ವರ್ಷಕ್ಕೆ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರಕ್ಕೆ ಕೆಳಗಿನಂತೆ ಆಯವ್ಯಯ ಪ್ರಾವಧಾನ ಮಾಡಲಾಗಿದೆ.

| ಲೆಕ್ಕಶೀರ್ಷಿಕೆ | | 2016-17 ಆಯವ್ಯಯ (ಯೋಜನೇತರ) (ರೂ.ಲಕ್ಷಗಳಲ್ಲಿ) |
|---|---|---|
| 2055-00-001-0-05 | | |
| 05 | ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ | |
| 002 | ವೇತನ – ಅಧಿಕಾರಿಗಳು | 3.00 |
| 003 | ವೇತನ – ಸಿಬ್ಬಂದಿಗಳು | 2.00 |
| 011 | ತುಟ್ಟಿ ಭತ್ಯೆ | 3.00 |
| 014 | ಇತರೆ ಭತ್ಯೆ | 2.00 |
| 015 | ಪೂರಕ ವೆಚ್ಚಗಳು | 52.00 |
| 020 | ವೈದ್ಯಕೀಯ ವೆಚ್ಚಗಳು | 1.00 |
| 021 | ವೈದ್ಯಕೀಯ ವೆಚ್ಚಗಳ ಮರುಪಾವತಿ | 3.00 |
| 041 | ಪ್ರಯಾಣ ವೆಚ್ಚಗಳು | 5.00 |
| 051 | ಸಾಮಾನ್ಯ ವೆಚ್ಚಗಳು | 6.00 |
| 059 | ಇತರೆ ಖರ್ಚುಗಳು | 1.00 |
| 071 | ಕಟ್ಟಡ ವೆಚ್ಚಗಳು | 1.00 |
| 195 | ಸಾರಿಗೆ ವೆಚ್ಚಗಳು | 25.00 |
| | **ಒಟ್ಟು** | **104.00** |

3.3.2 ಪ್ರಸಕ್ತ ವರ್ಷದಲ್ಲಿ ಕೆಳಗೆ ನೀಡಿರುವ ಮಾಹಿತಿಯಂತೆ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಕರ್ತವ್ಯ ನಿರ್ವಹಿಸಿದವರು:

| ಕ್ರ ಸಂ | ಅಧಿಕಾರಿಯ ಹೆಸರು ಮತ್ತು ಪದನಾಮ | ಹಣ ಸೆಳೆಯುವ ಮತ್ತು ಬಡವಾಡೆ ಮಾಡುವ ಅವಧಿ | |
|---|---|---|---|
| | | ಇಂದ | ರವರೆಗೆ |
| 1 | ಶ್ರೀ ಕೆ.ಆರ್.ನಾಗರಾಜ್ ರಾವ್<br>ಮುಖ್ಯ ಆಡಳಿತ ಅಧಿಕಾರಿ,<br>ಡಿಜಿ & ಐಜಿಪಿ ಕಛೇರಿ | 19.01.2016 | 08.04.2016 |
| 2 | ಶ್ರೀ ಎಸ್.ಬಿ.ಪಟಗಾರ್<br>ಸರ್ಕಾರದ ಉಪ ಕಾರ್ಯದರ್ಶಿ,<br>ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ | 21.05.2016 | 30.09.2016 |
| 3 | ಶ್ರೀ ಮಲ್ಲಿಕಾರ್ಜುನ<br>ಸರ್ಕಾರದ ಅಧೀನ ಕಾರ್ಯದರ್ಶಿ,<br>ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ | 23.12.2016 | – |

## 4 ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ ಸಭೆಗಳು:

2016 ನೇ ಸಾಲಿನಲ್ಲಿ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರವು 15 ಸಭೆಗಳನ್ನು ಈ ಕೆಳಗಿನ ದಿನಾಂಕಗಳಂದು ನಡೆಸಿತು:-

| 2016 ರಲ್ಲಿ ನಡೆದ ಸಭೆಗಳ ಕ್ರಮ ಸಂಖ್ಯೆ | ಆರಂಭದಿಂದಲೇ ನಡೆದ ಸಭೆಗಳ ಕ್ರಮ ಸಂಖ್ಯೆ | ಸಭೆಯ ದಿನಾಂಕ |
|---|---|---|
| 1/2016 | 32 | 13.01.2016 |
| 2/2016 | 33 | 10.02.2016 |
| 3/2016 | 34 | 24.02.2016 |
| 4/2016 | 35 | 16.03.2016 |
| 5/2016 | 36 | 06.04.2016 |
| 6/2016 | 37 | 27.04.2016 |
| 7/2016 | 38 | 03.05.2016 |
| 8/2016 | 39 | 17.05.2016 |
| 9/2016 | 40 | 22.06.2016 |
| 10/2016 | 41 | 13.07.2016 |
| 11/2016 | 42 | 02.08.2016 |
| 12/2016 | 43 | 06.08.2016 |
| 13/2016 | 44 | 10.08.2016 |
| 14/2016 | 45 | 24.08.2016 |
| 15/2016 | 46 | 14.12.2016 |

**5 ಕಾರ್ಯವಿಧಾನದ ವಿನಿಯಮಗಳು:**

ಪ್ರಾಧಿಕಾರವು ದಿ: 09.09.2015 ರಂದು ನಡೆದ ಸಭೆಯಲ್ಲಿ ಕರ್ನಾಟಕ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ (ಕಾರ್ಯವಿಧಾನ) ವಿನಿಯಮಗಳು, 2014 ನ್ನು ಪರಿಷ್ಕರಿಸಿತು. ಸರ್ಕಾರವೂ ಪತ್ರ ಸಂಖ್ಯೆ: ಒಇ 158 ಪೊಸಅ 2015, ದಿನಾಂಕ: 29.10.2015 ರನ್ವಯ ಪರಿಷ್ಕೃತ ವಿನಿಯಮಗಳಿಗೆ ಅನುಮೋದನೆ ನೀಡಿರುತ್ತದೆ. *(ಪರಿಷ್ಕೃತ ವಿನಿಯಮಗಳ ಪ್ರತಿ ಅನುಭಂಧ- III ರಲ್ಲಿರುತ್ತದೆ.)*

**6 ಮಾಹಿತಿ ಹಕ್ಕು ಅಧಿನಿಯಮ, 2005 ರಡಿಯಲ್ಲಿ ಪ್ರಕಟಗೊಳಿಸುವುದು:**

6.1 ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರವು ಮಾಹಿತಿ ಹಕ್ಕು ಅಧಿನಿಯಮ, 2005 ರ ಕಲಂ 4(1)(ಬಿ) ರಡಿಯಲ್ಲಿ ಪ್ರಾಧಿಕಾರಕ್ಕೆ ಸಂಬಂಧಪಟ್ಟ ಪ್ರಕಟಗೊಳಿಸಬೇಕಾದ ಮಾಹಿತಿಯನ್ನು ದಿ: 15.07.2015 ರಂದು ನಡೆದ ಸಭೆಯಲ್ಲಿ ಅಪ್ಡೇಟ್ ಮಾಡಿರುತ್ತದೆ.

6.2 ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರವು ದಿ: 15.07.2015 ರಂದು ನಡೆದ ಸಭೆಯಲ್ಲಿ ಮಾಹಿತಿ ಹಕ್ಕು ಅಧಿನಿಯಮ, 2005 ರ ಕಲಂ 5(1) ರಡಿಯಲ್ಲಿ ಶಾಖಾಧಿಕಾರಿ ರವರನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಯಾಗಿ ಮುಂದುವರೆಸಿತು ಹಾಗೂ ಅದೇ ಅಧಿನಿಯಮದ ಕಲಂ 19(1) ರಡಿಯಲ್ಲಿ ಉಪ ಕಾರ್ಯದರ್ಶಿ ರವರನ್ನು ಮೇಲ್ಮನವಿ ಪ್ರಾಧಿಕಾರ ಎಂದು ನೇಮಿಸಿತು.

6.3 ಮಾಹಿತಿ ಹಕ್ಕು ಅಧಿನಿಯಮ, 2005 ರ ಕಲಂ 8 ರಡಿಯಲ್ಲಿ 26 ಅರ್ಜಿಗಳು ಸ್ವೀಕೃತಗೊಂಡಿವೆ. 23 ಅರ್ಜಿಗಳಲ್ಲಿ ಕೇಳಿದ ಮಾಹಿತಿಯನ್ನು ಅರ್ಜಿದಾರರಿಗೆ ಕಳುಹಿಸಲಾಗಿರುತ್ತದೆ. ಉಳಿದ ಪ್ರಕರಣಗಳ ಗೃಹ ಇಲಾಖೆಯ ಸಾರ್ವಜನಿಕ ಮಾಹಿತಿ ಅಧಿಕಾರಿಗೆ ವರ್ಗಾಯಿಸಿ ಈ ವಿಷಯವನ್ನು ಅರ್ಜಿದಾರರಿಗೂ ತಿಳಿಸಲಾಗಿದೆ.

**7 ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಗಳು:-**

7.1 ಕರ್ನಾಟಕ ಪೊಲೀಸ್ ಅಧಿನಿಯಮ, 1963 (1964 ರ ಕರ್ನಾಟಕ ಅಧಿನಿಯಮ 4) ರ ಕಲಂ 20ಡಿ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು 30 ಜಿಲ್ಲೆಗಳಿಗೆ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಗಳನ್ನು ರಚಿಸಿದೆ. *(2016 ನೇ ಸಾಲಿನಲ್ಲಿ ಅಧ್ಯಕ್ಷ ಸ್ಥಾನದಲ್ಲಿದ್ದ ಪ್ರಾದೇಶಿಕ ಆಯುಕ್ತರು ಮತ್ತು ಅವರವರ ವ್ಯಾಪ್ತಿಯೊಳಗೊಂಡ ಜಿಲ್ಲೆಗಳ ವಿವರಗಳನ್ನು ಅನುಬಂಧ- IV ರಲ್ಲಿ ನೀಡಲಾಗಿದೆ).*

7.2 ಪ್ರತಿಯೊಂದು ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಗಳನ್ನು ಆಯಾ ಜಿಲ್ಲೆಯ ಪೊಲೀಸ್ ದೂರುಗಳ ಪ್ರಾಧಿಕಾರದ ಸದಸ್ಯ-ಕಾರ್ಯದರ್ಶಿಯನ್ನಾಗಿ ಪ್ರಕಟಿಸಲಾಗಿದೆ. ಆದೇಶ ಸಂಖ್ಯೆ: ಹೆಚ್.ಡಿ 21 ಪೊಸಇ 2015, ದಿ: 30.04.2015 ರನ್ವಯ ಸರ್ಕಾರವು ಬೆಂಗಳೂರು, ಹುಬ್ಬಳ್ಳಿ-ಧಾರವಾಡ, ಮೈಸೂರು, ಮಂಗಳೂರು ಮತ್ತು ಬೆಳಗಾವಿ ನಗರಗಳ ಪೊಲೀಸ್ ಆಯುಕ್ತರ ಅಧೀನದಲ್ಲಿರುವ ಕ್ಷೇತ್ರಗಳನ್ನು ಈಗಾಗಲೇ ರಚಿಸಿದ ಆಯಾ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರದ ವ್ಯಾಪ್ತಿಗೆ ಸೇರಿಸಿ ಆ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಪರ ಪೊಲೀಸ್ ಆಯುಕ್ತರು (ಆಡಳಿತ) ರವರನ್ನು ಪೊಲೀಸ್ ವರಿಷ್ಠಾಧಿಕಾರಿಗಳ ಬದಲಾಗಿ ಸದಸ್ಯ-ಕಾರ್ಯದರ್ಶಿಯನ್ನಾಗಿ ನೇಮಿಸಿ, ಪೊಲೀಸ್ ವರಿಷ್ಠಾಧಿಕಾರಿಗಳನ್ನೂ ಸದಸ್ಯರನ್ನಾಗಿ ಮುಂದುವರೆಸಿತು. ತದನಂತರ ಸರ್ಕಾರವು ಆದೇಶ ಸಂಖ್ಯೆ: ಹೆಚ್.ಡಿ 21 ಪೊಸಅ 2015,

ದಿ: 15.09.2015 ರನ್ವಯ ಮೈಸೂರು ಮತ್ತು ಮಂಗಳೂರು ನಗರಗಳಿಗೆ ಸಂಬಂಧಪಟ್ಟಂತೆ ಉಪ ಪೊಲೀಸ್ ಆಯುಕ್ತರು (ಕೇಂದ್ರ ಸ್ಥಾನ, ಅಪರಾಧ ಮತ್ತು ಸಂಚಾರ) ರವರನ್ನು ಸೇರ್ಪಡೆ ಜಾರಿ ಮಾಡಿತು. *(2016 ನೇ ಸಾಲಿನಲ್ಲಿ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಗಳ ಸದಸ್ಯ ಕಾರ್ಯದರ್ಶಿಗಳ ವಿವರಗಳನ್ನು ಅನುಬಂಧ– V ರಲ್ಲಿ ನೀಡಲಾಗಿದೆ).*

7.3 ಸರ್ಕಾರದಿಂದ ಅಧಿಸೂಚನೆ ಸಂಖ್ಯೆ: ಒಇ 150 ಪೊಸಿಆ 2014, ಬೆಂಗಳೂರು, ದಿ: 20.10.2014 ರನ್ವಯ ನಾಗರಿಕ ಸೇವೆಯಿಂದ ನಿವೃತ್ತ ಜಂಟಿ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಿಲ್ಲದವರ ಶ್ರೇಣಿಯಲ್ಲಿ ನೇಮಿಸಿದ ಸದಸ್ಯರೇ ವರ್ಷ 2016 ರಲ್ಲಿಯೂ ಮುಂದುವರೆದರು. *(ವಿವರಗಳನ್ನು ಅನುಬಂಧ– VI ರಲ್ಲಿ ನೀಡಲಾಗಿದೆ).*

7.4 ಸರ್ಕಾರದಿಂದ ಕಾಲ ಕಾಲಕ್ಕೆ ವಿವಿಧ ಅಧಿಸೂಚನೆಗಳ ಮುಖಾಂತರ 27 ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಗಳಿಗೆ ನಾಗರಿಕ ಸಮಾಜ ಶ್ರೇಣಿಯ ಸದಸ್ಯರನ್ನು ನೇಮಿಸಲಾಗಿರುತ್ತದೆ. *(ವಿವರಗಳನ್ನು ಅನುಬಂಧ– VII ರಲ್ಲಿ ನೀಡಲಾಗಿದೆ).*

## 8 ವರ್ಷ 2016 ರಲ್ಲಿ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದಲ್ಲಿ ಸ್ವೀಕೃತವಾದ ದೂರುಗಳ ವಸ್ತುಸ್ಥಿತಿ:

### 8.1 ಒಟ್ಟು ವಸ್ತುಸ್ಥಿತಿ:

2016ರಲ್ಲಿ 471 ದೂರು ಪ್ರಕರಣಗಳು ದಾಖಲಾದವು 2015ನೇ ಸಾಲಿನಲ್ಲಿ ಸ್ವೀಕೃತವಾದ ಇನ್ನೂ 83 ದೂರು ಬಾಕಿ ಇದ್ದು. ಒಟ್ಟು 554 ದೂರುಗಳಲ್ಲಿ 2016ನೇ ಸಾಲಿನಲ್ಲಿ 145 ಪ್ರಕರಣಗಳು ವಿಲೇಯಾಗಿದ್ದು ವರ್ಷ್ಯಾಂತ್ಯಕ್ಕೆ 409 ಪ್ರಕರಣಗಳು ಬಾಕಿ ಉಳಿದಿರುತ್ತವೆ. 2016 ನೇ ಸಾಲಿನಲ್ಲಿ ಪರಿಗಣಿಸಿದ 554 ಪ್ರಕರಣಗಳಲ್ಲಿ ಅಪರ ಪೊಲೀಸ್ ಅಧೀಕ್ಷಕರು ಹಾಗೂ ಮೇಲ್ಪಟ್ಟ ದರ್ಜೆಗಳಲ್ಲಿರುವ ಪೊಲೀಸ್ ಅಧಿಕಾರಿಗಳ ಬಗ್ಗೆ ಉಲ್ಲೇಖ ಮಾಡಿರುವ 60 ಪ್ರಕರಣಗಳಿದ್ದವು. ಉಪ ಅಧೀಕ್ಷಕರು ಹಾಗೂ ಕೆಳಗಿನ ದರ್ಜೆಗಳಲ್ಲಿರುವ ಪೊಲೀಸ್ ಅಧಿಕಾರಿಗಳ ವಿರುದ್ಧ ಆಪಾದನೆ ಮಾಡಿರುವ 145 ಪ್ರಕರಣಗಳಿದ್ದವು. ಉಳಿದ 10 ಪ್ರಕರಣಗಳಲ್ಲಿ ಯಾವುದೇ ಪೊಲೀಸ್ ಅಧಿಕಾರಿಗಳು ಒಳಗೊಂಡಿರುವುದಿಲ್ಲ. *(ಅನುಬಂಧ VIIIರಲ್ಲಿ 2016 ನೇ ವರ್ಷದ ಪ್ರಾರಂಭದಲ್ಲಿ ಬಾಕಿಯಿದ್ದ, ಸ್ವೀಕೃತಿಯಾದ, ವಿಲೇವಾರಿಯಾದ ಮತ್ತು ವರ್ಷಾಂತ್ಯಕ್ಕೆ ಬಾಕಿಯಿದ್ದ ವಿವರಗಳನ್ನು ನೀಡಲಾಗಿದೆ)*

### 8.2) ವರ್ಷದಲ್ಲಿ ಪ್ರಾಧಿಕಾರವು "ಗಂಭೀರ ದುರ್ನಡತೆ" ಮತ್ತು "ದುರ್ನಡತೆ" ಎಂದು ವಿಚಾರಿಸಲ್ಪಟ್ಟಿರುವ ಪ್ರಕರಣಗಳ ಸಂಖ್ಯೆ ಮತ್ತು ವಿಧಗಳು:

8.2.1 "ಗಂಭೀರ ದುರ್ನಡತೆ" ಆಪಾದನೆಯ 1 ಪ್ರಕರಣ ಪ್ರಾಧಿಕಾರದಲ್ಲಿ 2016 ವರ್ಷದಲ್ಲಿ ಪರಿಗಣಿಸಲಾಯಿತು.. ಈ ಪ್ರಕರಣಗಳಲ್ಲಿ ಒಂದು ಪ್ರಕರಣ (**CMP 106**/2016) ಲಾಕಪ್ ಡೆತ್ ಆಗಿದ್ದು, ಈ ಪ್ರಕರಣವನ್ನು ಮುಕ್ತಾಯಗೊಳಿಸಲಾಯಿತು.

8.2.2 ಪ್ರಕರಣಗಳ ಸ್ವರೂಪದ ಬಗ್ಗೆ ಗಮನಿಸಿದ ಅಂಶಗಳು:

ಬಹಳಷ್ಟು ದೂರುದಾರರಗಳು ದೂರುನೀಡಿ ಅವರನ್ನು ಸಂಪರ್ಕಿಸಿದ್ದರೂ ಅಧೀನ ಅಧಿಕಾರಿಗಳ ಮೇಲೆ ಯಾವುದೇ ಕ್ರಮ ಕೈಗೊಳ್ಳದಿರುವ ವರಿಷ್ಠ ಅಧಿಕಾರಿಗಳ ವಿರುದ್ಧ ಇದ್ದವು. ಕೆಲವು ಪ್ರಕರಣಗಳಲ್ಲಿ ಎಫ್.ಐ.ಆರ್ ದಾಖಲಿಸದಿರುವ ಬಗ್ಗೆ ವರಿಷ್ಠ ಅಧಿಕಾರಿಗಳಿಗೆ ದೂರು ಸಲ್ಲಿಸಿದ ಮೇಲೆ ಅವರು ಸಂಬಂಧಪಟ್ಟ ಅಧಿಕಾರಿಗಳಿಗೆ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲು ಆದೇಶಿಸಿದ್ದರೆಂದು ಕಂಡು ಬರುತ್ತದೆ. ಪೊಲೀಸ್ ಉಪ ಅಧೀಕ್ಷಕರ ದರ್ಜೆ ಮತ್ತು ಅದರ ಕೆಳಗಿನ ದರ್ಜೆಗಳಲ್ಲಿರುವ ಪೊಲೀಸ್

ಅಧಿಕಾರಿಗಳ ವಿರುದ್ಧ ಇದ್ದ ಆಪಾದನೆಗಳನ್ನು ಈ ಪ್ರಾಧಿಕಾರವು ಗಮನಿಸಿದಂತೆ ಈ ಕೆಳಗಿನಂತೆ ಮುಖ್ಯತಃ ವರ್ಗೀಕರಿಸಬಹುದಾಗಿರುತ್ತದೆ:-

(ಅ) ಕರ್ತವ್ಯಲೋಪ:

i. ದೂರುಗಳನ್ನು ಸ್ವೀಕರಿಸದಿರುವುದು ಮತ್ತು ಎಫ್.ಐ.ಆರ್ ದಾಖಲಿಸದಿರುವುದು.

ii. ಎಫ್.ಐ.ಆರ್ ದಾಖಲಿಸಿದ ನಂತರ ಯಾವುದೂ ಕ್ರಮ ಕೈಗೊಳ್ಳದಿರುವುದು ಮತ್ತು ಕೆಲವು ಪ್ರಕರಣಗಳಲ್ಲಿ ವರಿಷ್ಠ ಅಧಿಕಾರಿಗಳ ಗಮನಕ್ಕೆ ತಂದ ನಂತರ ಎಫ್.ಐ.ಆರ್ ದಾಖಲಿಸಿದರೂ ಯಾವುದೇ ಕ್ರಮ ಕೈಗೊಳ್ಳದಿರುವುದು.

(ಆ) ಅಧಿಕಾರ ದುರುಪಯೋಗ:

i. ಕೆಟ್ಟ ಬೈಗುಳಗಳನ್ನು ಬಳಸಿ ನಿಂದಿಸುವ ವರ್ತನೆ.

ii. ಕಿರುಕುಳ.

iii. ಸುಳ್ಳು ಪ್ರಕರಗಳನ್ನು ದಾಖಲಿಸುವುದಾಗಿ ಬೆದರಿಸುವುದು.

iv. ಸುಳ್ಳು ಪ್ರಕರಗಳಲ್ಲಿ ತೊಡಕಿಸುವುದು.

v. ದೈಹಿಕ ಹಿಂಸೆ ಬಳಸುವುದು.

(ಇ) ದೂರುದಾರರ ಪ್ರತಿಸ್ಫರ್ಧಿ / ವಿರೋಧಿಗಳ ಜೊತೆ ಶಾಮೀಲಾಗಿರುವುದು.

i. ಎಫ್.ಐ.ಆರ್ ದಾಖಲಿಸದಿರುವುದು.

ii. ಎಫ್.ಐ.ಆರ್ ದಾಖಲಿಸಿದ ನಂತರ ಸರಿಯಾಗಿ ತನಿಖೆ ಮಾಡದೆ ಪ್ರತಿಸ್ಫರ್ಧಿಗಳಿಗೆ ಸಹಾಯ ಮಾಡುವುದು.

iii. ಪ್ರತಿಸ್ಪರ್ಧಿಗಳ ವಿರುದ್ಧ ನ್ಯಾಯಾಲಯದ ತಡೆಯಾಜ್ಞೆಯನ್ನು ಜಾರಿ ಮಾಡದಿರುವುದು.

iv. ಆಪಾದಿತರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೇ ದೂರುಗಳನ್ನು ಮುಚ್ಚಿಹಾಕುವುದು.

v. ಆಪಾದಿತರ ವಿರುದ್ಧ ದೂರಿನ ಮೇಲೆ 'ಬಿ' ರಿಪೋರ್ಟ್ ದಾಖಲಿಸುವುದು.

vi. ದೂರುದಾರರ ವಿರುದ್ಧ ಪ್ರತಿಸ್ಪರ್ಧಿಯೊಂದಿಗೆ ಕಾನೂನು ಬಾಹಿರ ಚಟುವಟಿಕೆಯಲ್ಲಿ ಭಾಗಿಯಾಗಿರುವುದು.

(ಈ)ಅಕ್ರಮ ಬಂಧನ, ಗಂಭೀರ ಗಾಯ, ಪೊಲೀಸ್ ಬಂಧನದಲ್ಲಿ ಮೃತ್ಯು.

(ಉ)ಭ್ರಷ್ಟಾಚಾರ ಮತ್ತು ಲಂಚಕ್ಕೆ ಬೇಡಿಕೆಯಿಡುವುದು.

8.3) <u>ದೂರುದಾರರು ತಮ್ಮ ದೂರುಗಳ ಮೇಲೆ ಇಲಾಖಾ ವಿಚಾರಣೆಯಿಂದ ಅತೃಪ್ತಿಗೊಂಡು ಪ್ರಾಧಿಕಾರಕ್ಕೆ ಒಪ್ಪಿಸಿದ "ಗಂಭೀರ ದುರ್ನಡತೆ" ಯ ಪ್ರಕರಣಗಳ ಸಂಖ್ಯೆ ಮತ್ತು ವಿಧಗಳು:</u>

ಯಾವುದೂ ಇಲ್ಲ

## 9 ವರ್ಷ 2016 ರಲ್ಲಿ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಗಳಲ್ಲಿ ಸ್ವೀಕೃತವಾದ ದೂರುಗಳ ವಸ್ತುಸ್ಥಿತಿ:

### 9.1 ಒಟ್ಟು ವಸ್ತುಸ್ಥಿತಿ:

2016ರಲ್ಲಿ 455 ದೂರು ಪ್ರಕರಣಗಳು ದಾಖಲಾದವು 2015ನೇ ಸಾಲಿನಲ್ಲಿ ಸ್ವೀಕೃತವಾದ ಇನ್ನೂ 80 ದೂರು ಬಾಕಿ ಇದ್ದು. ಒಟ್ಟು 537 ದೂರುಗಳಲ್ಲಿ 2016ನೇ ಸಾಲಿನಲ್ಲಿ 155 ಪ್ರಕರಣಗಳು ವಿಲೇಯಾಗಿದ್ದು ವರ್ಷಾಂತ್ಯಕ್ಕೆ 382 ಪ್ರಕರಣಗಳು ಬಾಕಿ ಉಳಿದಿರುತ್ತವೆ. ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಗಳು 2016ನೇ ಸಾಲಿನಲ್ಲಿ ಒಟ್ಟು 29 ಸಭೆಗಳನ್ನು ನಡೆಸಿರುತ್ತವೆ. *(ವಿವರಗಳನ್ನು ಅನುಬಂಧ– IX ರಲ್ಲಿ ನೀಡಲಾಗಿದೆ).*

**9.2)** <u>ವರ್ಷದಲ್ಲಿ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಗಳಿಂದ "ಗಂಭೀರ ದುರ್ನಡತೆ" ಮತ್ತು "ದುರ್ನಡತೆ" ಗೆ ಸಂಬಂಧಪಟ್ಟ ಪ್ರಕರಣಗಳನ್ನು ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರಕ್ಕೆ ವರ್ಗಾಯಿಸಿದ ಪ್ರಕರಣಗಳ ಸಂಖ್ಯೆ ಮತ್ತು ವಿಧಗಳು:</u>

ಯಾವುದೂ ಇಲ್ಲ.

**9.3)** <u>ದೂರುದಾರರು ತಮ್ಮ ದೂರುಗಳ ಮೇಲೆ ಇಲಾಖಾ ವಿಚಾರಣೆಯಿಂದ ಅತೃಪ್ತಿಗೊಂಡು ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಗಳಿಗೆ ಒಪ್ಪಿಸಿದ "ದುರ್ನಡತೆ" ಯ ಪ್ರಕರಣಗಳ ಸಂಖ್ಯೆ ಮತ್ತು ವಿಧಗಳು:</u>

ಯಾವುದೂ ಇಲ್ಲ.

**9.4)** <u>ಪೊಲೀಸರಿಗೆ ಮುಂದಿನ ಕ್ರಮ ಕೈಗೊಳ್ಳುವ ಸಲುವಾಗಿ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರಗಳು ಮೇಲೆ ಉಲ್ಲೇಖಿಸಿದ ಪ್ರಕರಣಗಳಲ್ಲಿ ಸಲಹೆ ಅಥವಾ ನಿರ್ದೇಶನ ನೀಡಿದ ಪ್ರಕರಣಗಳ ಸಂಖ್ಯೆ ಮತ್ತು ವಿಧಗಳು:</u>

ಯಾವುದೂ ಇಲ್ಲ.

**ಅನುಬಂಧ – 1**

(*ಉಲ್ಲೇಖ: ಕಂಡಿಕೆ 1.1*)

ಭಾರತದ ಸರ್ವೋಚ್ಚ ನ್ಯಾಯಾಲಯವು 1996 ನೇ ಸಾಲಿನ ಸಿವಿಲ್ ರಿಟ್ ಅರ್ಜಿ ಸಂಖ್ಯೆ: 310 ರಲ್ಲಿ ದಿನಾಂಕ 22.09.2006 ರಂದು ನೀಡಿದ ತೀರ್ಪಿನ *ಪ್ರಸಕ್ತ ಭಾಗ:*

"Police Complaints Authority:

(6) There shall be a Police Complaints Authority at the district level to look into complaints against police officers of and up to the rank of Deputy Superintendent of Police. Similarly, there should be another Police Complaints Authority at the State level to look into complaints against officers of the rank of Superintendent of Police and above. The district level Authority may be headed by a retired District Judge while the State level Authority may be headed by a retired Judge of the High Court/Supreme Court. The head of the State level Complaints Authority shall be chosen by the State Government out of a panel of names proposed by the Chief Justice; the head of the district level Complaints Authority may also be chosen out of a panel of names proposed by the Chief Justice or a Judge of the High Court nominated by him. These Authorities may be assisted by three to five members depending upon the volume of complaints in different States/districts, and they shall be selected by the State Government from a panel prepared by the State Human Rights Commission/Lok Ayukta/State Public Service Commission. The panel may include members from amongst retired civil servants, police officers or officers from any other department, or from the civil society. They would work whole time for the Authority and would have to be suitably remunerated for the services rendered by them. The Authority may also need the services of regular staff to conduct field inquiries. For this purpose, they may utilize the services or retired investigators from the CID, Intelligence, Vigilance or any other organization. The State level Complaints Authority would take cognizance of only allegations of serious misconduct by the police personnel, which would include incidents involving death, grievous hurt or rape in police custody. The district level Complaints Authority would, apart from above cases, may also inquire into allegations of extortion, land/house grabbing or any incident involving serious abuse of authority. The recommendations of the Complaints Authority, both at the district and State levels, for any action, departmental or criminal, against a delinquent police officer shall be binding on the concerned authority."

## ಅನುಬಂಧ – II

(ಉಲ್ಲೇಖ: ಕಂಡಿಕೆ 1.2)

### ಅಧಿನಿಯಮದಲ್ಲಿ ಪ್ರಕಾಶಿತ ಪೊಲೀಸ್ ದೂರುಗಳ ಪ್ರಾಧಿಕಾರಗಳಿಗೆ ಸಂಬಂಧಪಟ್ಟ ಪ್ರಾವಧಾನಗಳ ಪುನರಾವೃತ್ತಿ:

**20C. State Police Complaints Authority:-** (1) The State Government shall, by notification in the official Gazette, constitute the State Police Complaints Authority consisting of five persons, namely:-

(i) One shall be the Chairman selected from among the panel of three retired High Court Judges recommended by the Chief Justice of High Court of Karnataka.

(ii) one member shall be from among the retired Civil Service who shall be an officer not below the rank of Principal Secretary to Government;

(iii) one member shall be from Civil Society. The Civil Society member shall be chosen by the State Government from amongst the panel of three names recommended by the Search Committee consisting of three persons nominated by the State Government one each representing the Human Rights Commission, the Karnataka Public Service Commission and the Lokayukta. The State Government shall appoint one of the members as the Chairman of the Search Committee and an officer not below the rank of Deputy Secretary to Government, Home Department as the convener of the Search Committee. The persons in the panel shall be a person of repute who has rendered humanitarian service in the field of education, health, upliftment of the poor etc. and had not aligned himself with any political party or ideological group;

(iv) one women IPS Officer of not below the rank of Deputy Inspector General of Police; and

(v) the Additional General of Police (Grievance) nominated by the State Government as the Ex-officio member and member Secretary of the Authority.

(2) A person shall be disqualified for being appointed as member, if he:-

(a) has directly or indirectly associated himself with any Anti Social or Anti National group or body;

(b) has been convicted and sentenced to imprisonment for an offence which, in the opinion of the State Government, involves moral turpitude; or

(c) is an undischarged insolvent; or

(d) is of unsound mind and stands so declared by a competent court;

(e) has such other disqualifications as may be prescribed.

(3) Every non-official member of the State Police Complaints Authority shall hold office for a period of three years.

(4) The salary or honorarium and other allowances payable to, and the other terms and conditions of service of the non-official members of the State Police Complaints Authority shall be such as may be prescribed.

(5) The Government shall provide such number of staff as is necessary for assisting the functions of the State Police Complaints Authority.

(6) The State Police Complaints Authority shall look into complaints against officers of the rank of Superintendent of Police and above, including Additional Superintendent of Police, and take cognizance of allegations of serious misconduct by the police officers which would include incidents involving death, grievous hurt or rape in police custody.

(7) The State Police Complaints Authority shall inquire into allegations of serious misconduct against police officers, after providing an opportunity of being heard to the alleged police officer either *suo moto* or on a complaint received from any of the following, namely:-

(a) a victim or any person on his behalf; or

(b) the National or the State Human Rights Commission; or

(c) the police; or

(d) any other source.

Explanation:- (1) "Serious misconduct" for the purpose of this Chapter, shall mean any act or omission of a police officer that leads to or amounts to,-

(a) death in police custody; or

(b) grievous hurt, as defined in section 320 of the Indian Penal Code, 1860 ; or

(c) rape or attempt to commit rape; or

(d) arrest or detention without due process of law.

(2) "Misconduct" in this context, shall mean any willful breach or neglect by a police officer of any law, rule, regulation applicable to the police that adversely affects the rights of any member of the public, excluding "serious misconduct" as defined in explanation (1).

(8) In the cases *suo moto* inquired by the State police Complaints Authority, it may, issue notice to Director General and Inspector General of Police and direct him to file his views on the complaint during the enquiry. The State Police Complaints Authority may take into account the views and facts furnished by the Director General and Inspector General of Police that may have a material bearing on the cases;

Provided that the State Police Complaints Authority shall not have jurisdiction on the complaint against police officer where a separate authority is created by any other Act for this purpose.

(9) On completion of the enquiry, if the allegations are proved partly or fully, the State Police Complaints Authority shall forward its report to the disciplinary authority for appropriate action against the accused officers.

(10) The State Police Complaints Authority shall also supervise, monitor and control the functioning of District Police Complaints Authorities. It shall compile Annual Report of the functioning of State Police Complaints Authority and District Police Complaints Authorities and submit to the Government. The annual report shall contain:-

(a) the numbers and types of cases of "serious misconduct" and "misconduct" considered by the State Police Complaints Authority during the year;

(b) the number and types of cases of "serious misconduct" referred to it by the complainants upon being dissatisfied by the departmental inquiry into his complaint;

(c) the number and types of cases referred to above in which advice or direction was issued by it to the police for further action;

(d) such other related Administrative and financial matters as may be prescribed.

**20D. District Police Complaints Authority.-** (1) The Government shall in consultation with State Police Complaints Authority, by notification in the official Gazette, constitute the District Police Complaints Authority under the chairmanship of the Regional Commissioner of the Region/Deputy commissioner and the district(w.e.f.27.07.2016) by an ammindment and three other members, namely:-

(i) one member of retired Civil Service shall be an officer not below the rank of Joint Secretary to Government/Assistant commissioner(w.e.f.27.07.2016) by an ammindment

(ii) one member shall be from the Civil Society. The Civil Society member shall be chosen by the State Government from amongst the panel of three names recommended by the Search Committee consisting of three persons one each representing the Human Rights Commission, Karnataka Public Service Commission and the Lokayukta. The State Government shall appoint one of the members as Chairman of the Search Committee and an officer not below the rank of Deputy Secretary to Government, Home Department as convener of the Committee. The persons in the panel shall be a person of repute who has rendered humanitarian service in the field of education, Health, upliftment of the poor etc. and had not aligned himself with any political party or ideological group; and

(iii) the Superintendent of Police in charge of the District shall be ex-officio member and member Secretary of the Authority.

(2) A person shall be disqualified for being appointed as member if he.-

(a) has directly or indirectly associated himself with any Anti Social or Anti National group or body;

(b) has been convicted and sentenced to imprisonment for an offence which, in the opinion of the State Government, involves moral turpitude; or

(c) is an undischarged insolvent; or

(d) is of unsound mind and stands so declared by a competent court; or

(e) has such other disqualifications as may be prescribed by the State Government.

(3) Every member of the District Police Complaints Authority other than the ex-officio member shall hold office for a period of three years.

(4) The salary or honorarium and other allowances payable to, and the other terms and conditions of service of the non-official members of the District Police Complaints Authority shall be such as may be prescribed.

(5) It shall be the duty of the district police complaints authority to ensure that all its members and their staff are regularly trained, interalia about.-

(a) technical and legal issues related to departmental inquires;

(b) specific forms of human rights violation; and

(c) appropriate handling of victims of police abuse.

(6) Necessary staff required for the functioning of the District Police Complaints Authority shall be provided by Government.

(7) The District Police Complaints Authority shall look into complaints against police officers of and below the rank of Deputy Superintendent of Police and take cognizance of allegations of serious misconduct by the police officers, which would include incidents involving death, grievous hurt or rape in police custody.

(8) The District Police Complaints Authority shall,-

(a) have the power to enquire into misconduct or abuse of power by or against police officers of and below the rank of Deputy Superintendent of Police after giving an opportunity of being heard to him. The Authority shall have the power to investigate any

case itself or ask any other agency to investigate and submit a report. The District Police Complaints Authorities shall submit its report to the competent disciplinary authority for appropriate action against the accused officers;

(b) if the complaint contains allegations against any police officer of or above the rank of Deputy Superintendent of Police the District Police Complaints Authority, shall forward the same to the State Complaints Authority, for further action;

(c) forward the complaints of "serious misconduct", received directly by it, to the State Police Complaints Authority for further action;

Provided that District Police Complaints Authority shall not have jurisdiction on the complaints against the police offices where a separate authority is created by any other Act for this purpose.

(9) Each District police Complaints Authority shall prepare and submit to the State police complaints Authority an annual report before the end of each calendar year, inter alia, containing.-

(a) the numbers and types of cases of "serious misconduct" and "misconduct" forwarded by it to the State Police Complaints Authority during the year;

(b) the number and types of cases of "misconduct" referred to it by the complainants upon being dissatisfied by the departmental inquiry into his complaint;

(c) the number and types of cases referred to in clause (b) above in which advice or direction was issued by it to the police for further action;

(d) such other related administrative and financial matters as may be prescribed.

**20E. Powers of the State Police Complaints Authority and District Police Complaints Authority:-** The State Police Complaints Authority and District Police Complaints Authority shall, while investigating any matter under this Act, have all the powers of a civil court in trying a suit and in particular, in respect of the following matters, namely:-

(a) summoning and enforcing the attendance of any person from any part of the State and examining him on oath;

(b) requiring the discovery and production of any document;

(c) receiving evidence on affidavits;

(d) requisitioning any public record or copy there of from any court or office;

(e) issuing Commissions for the examination of witnesses and documents; and

(f) any other matter which may be prescribed."

## ಅನುಬಂಧ – III

*(ಉಲ್ಲೇಖ: ಕಂಡಿಕೆ 5)*

## ಕರ್ನಾಟಕ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ (ಕಾರ್ಯವಿಧಾನ) ವಿನಿಮಯಗಳು, 2014

**(ಪ್ರಾಧಿಕಾರದಿಂದ ದಿ: 09.09.2015 ರಂದು ಪರಿಷ್ಕೃತ ಮತ್ತು ಸರ್ಕಾರದಿಂದ ಪತ್ರ ಸಂಖ್ಯೆ: *ಒಇ 158 ಪೊಸಿಅ 2015 ದಿನಾಂಕ:29.10.2015 ರನ್ವಯ ಅನುಮೋದಿತ* )**

### ಅಧ್ಯಾಯ–1
### ಪ್ರಾರಂಭ

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ:–** (1) ಈ ವಿನಿಯಮಗಳನ್ನು ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರದ (ಕಾರ್ಯವಿಧಾನದ) ವಿನಿಯಮಗಳು, 2014 ಎಂದು ಕರೆಯತಕ್ಕದ್ದು.

   (2) ಇವು ಕೂಡಲೇ ಜಾರಿಗೆ ಬರತಕ್ಕದ್ದು.

2. **ಪರಿಭಾಷೆಗಳು:–** (1) ಈ ವಿನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

   (ಅ) **'ಅಧಿನಿಯಮ'** ಎಂದರೆ ಕರ್ನಾಟಕ ಪೊಲೀಸು ಅಧಿನಿಯಮ, 1963;

   (ಆ) **"ಅಧ್ಯಕ್ಷರು"** ಎಂದರೆ ಅಧಿನಿಯಮದ ಕಲಂ 20ಸಿ(1) ರ ಮೇರೆಗೆ ನೇಮಕಗೊಂಡ ಪ್ರಾಧಿಕಾರದ ಅಧ್ಯಕ್ಷರು;

   (ಇ) **"ಕಾರ್ಯದರ್ಶಿ"** ಎಂದರೆ ಪ್ರಾಧಿಕಾರದ ಸದಸ್ಯ–ಕಾರ್ಯದರ್ಶಿ.

   (ಈ) **"ಪ್ರಾಧಿಕಾರ"** ಎಂದರೆ ಅಧಿನಿಯಮದ ಕಲಂ 20ಸಿ ರ ಮೇರೆಗೆ ಸರ್ಕಾರವು ರಚಿಸಿದ ರಾಜ್ಯ ಪೊಲೀಸ್ ದೂರುಗಳ ಪ್ರಾಧಿಕಾರ;

   (ಉ) **"ದೂರುದಾರ"** ಎಂದರೆ ಯಾರಿಂದ ಅಥವಾ ಯಾರ ಪರವಾಗಿ ಪ್ರಾಧಿಕಾರಕ್ಕೆ ದೂರು ಸಲ್ಲಿಸಲಾಗಿದೆಯೋ ಅಥವಾ ಉಲ್ಲೇಖಿಸಲಾಗಿದೆಯೋ ಅಂತಹ ವ್ಯಕ್ತಿ;

   (ಊ) **"ದೂರು"** ಎಂದರೆ ಯಾವುದೇ ಮೂಲದಿಂದ ಅಥವಾ ಪ್ರಾಧಿಕಾರವು ಸ್ವೀಕರಿಸಿದ ಪೊಲೀಸು ಅಧಿಕಾರಿಗಳ ವಿರುದ್ಧ ಆಪಾದನೆಗಳು ಒಳಗೊಂಡ ಯಾವುದೇ ಅರ್ಜಿ ಅಥವಾ ಪತ್ರ ಅಥವಾ ಪ್ರಾಧಿಕಾರವು ತಾನಾಗಿಯೇ ತೆಗೆದುಕೊಂಡ ಪೊಲೀಸು ಅಧಿಕಾರಿಗಳ ವಿರುದ್ಧ ಆಪಾದನೆಗಳನ್ನು ಒಳಗೊಂಡ ವಿಷಯ;

   (ಋ) **"ಜಿಲ್ಲಾ ಪ್ರಾಧಿಕಾರ"** ಎಂದರೆ ಎಂದರೆ ಅಧಿನಿಯಮದ ಕಲಂ 20ಡಿ(1) ರ ಮೇರೆಗೆ ಸರ್ಕಾರವು ರಚಿಸಿದ ಜಿಲ್ಲಾ ಪೊಲೀಸ್ ದೂರುಗಳ ಪ್ರಾಧಿಕಾರ;

   (ಎ)"ವರ್ಷ" ಎಂದರೆ ಕ್ಯಾಲೆಂಡರ್ ವರ್ಷ, ಅನ್ಯಥಾ ವಿವರಿಸಿದ ಹೊರತು;

   (ಏ) **"ಸರ್ಕಾರ"** ಎಂದರೆ ಕರ್ನಾಟಕ ಸರ್ಕಾರ;

   (ಐ) **"ಸದಸ್ಯ"** ಎಂದರೆ ಅಧಿನಿಯಮ 20(ಸಿ)1 ಪ್ರಕರಣದ ಮೇರೆಗೆ ನೇಮಕಗೊಂಡ ಸದಸ್ಯ–ಕಾರ್ಯದರ್ಶಿಯು ಒಳಗೊಂಡು ಪ್ರಾಧಿಕಾರದ ಸದಸ್ಯ;

   (2) ಈ ವಿನಿಯಮಗಳಲ್ಲಿ ಪರಿಭಾಷಿಸದ ಪದಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಸಂಭಾಷಿಸಿದ ವ್ಯಾಪ್ತಿಯಲ್ಲಿ, ಅದರಲ್ಲಿ ಅವುಗಳಿಗೆ ನೀಡಿದ ಅರ್ಥವನ್ನೇ ಹೊಂದಿರತಕ್ಕದ್ದು.

3. **ಒಳ ಬರುವ ಪತ್ರಗಳ ಸ್ವೀಕೃತಿ ಮತ್ತು ಹಂಚಿಕೆ ಮತ್ತು ಹೊರ ಹೋಗುವ ಪತ್ರಗಳ ವಿಲೇವಾರಿ.–**

   (1) ಅವರು ಸ್ವೀಕರಿಸಿದ ಮತ್ತು ಪ್ರಾಧಿಕಾರದ ಹೆಸರಿಗೆ ಬಂದ ಇತರೆ ಯಾವುದೇ ವಿಧವಾದ ಎಲ್ಲ ಪತ್ರ ವ್ಯವಹಾರಗಳನ್ನು, ಪ್ರಾಧಿಕಾರದ ಅದರ ಅಧ್ಯಕ್ಷರು, ಸದಸ್ಯರು ಅಥವಾ ಇತರೆ ಅಧಿಕಾರಿಗೆ ಅವರ ಹೆಸರಿನ ಮೂಲಕವಾಗಲಿ ಅಥವಾ ಪದನಾಮದಿಂದಾಗಲಿ ಇತರ ಸಾಮಾನ್ಯ ವಿಭಾಗದಲ್ಲಿ ಈ ಕೆಲಸದೊಂದಿಗೆ ವಹಿಸಿದ ನೌಕರರು ಸ್ವೀಕರಿಸತಕ್ಕದ್ದು. ಆತನನ್ನು ಒಳಬರುವ ಸ್ವೀಕೃತಿ ಸಿಬ್ಬಂಧಿ ಎಂದು ಕರೆಯಲಾಗುವುದು.

   (2) ಅಧ್ಯಕ್ಷರು ಅಥವಾ ಸದಸ್ಯರಿಗೆ ಆ ಹೆಸರಿನಿಂದ ಬಂದ ಯಾವುದೇ ಪತ್ರವನ್ನು ಮೊಹರು ಹಾಕಿದ ಲಕೋಟೆಯಲ್ಲಿ ಅಥವಾ ತೆರೆದ ಲಕೋಟೆ ಅಥವಾ ಲಕೋಟೆ ಇಲ್ಲದೆ ಇದ್ದರೂ ಮುಕ್ತ ಪತ್ರದಿಂದ ಅಥವಾ ಲಕೋಟೆ ಯಾವುದಾದರೂ ಮಾಹಿತಿ ಲಭ್ಯವಿದ್ದರೆ ಅದರೊಂದಿಗೆ ಸ್ವೀಕೃತಿ ರಿಜಿಸ್ಟರಿನಲ್ಲಿ ಸಂಖ್ಯೆಯನ್ನು

ನಮೂದಿಸುವುದರೊಂದಿಗೆ ವಿಳಾಸದಾರನಿಗೆ ಅಥವಾ ಆತನ/ಆಕೆಯ ಆಪ್ತ ಶಾಖೆಗೆ ಅದನ್ನು ತೆರೆಯದೆ ಮತ್ತು ಕಳುಹಿಸವುದರೊಂದಿಗೆ ಒಳಬರುವ ಸ್ವೀಕೃತಿ ಸಿಬ್ಬಂದಿ, ಸ್ವೀಕೃತಿ ರಿಜಿಸ್ಟರಿನಲ್ಲಿ ನಮೂದಿಸತಕ್ಕದ್ದು. ಎಲ್ಲ ಇತರ ಪತ್ರಗಳನ್ನು ತೆರೆಯತಕ್ಕದ್ದು ಮತ್ತು ಸಾಮಾನ್ಯ ವಿಭಾಗದ ಪ್ರಭಾರದಲ್ಲಿರುವ ಮೇಲ್ವಿಚಾರಣೆಯ ನಿರ್ದೇಶನದ ಮೇರೆಗೆ ಒಳಬರುವ ಸ್ವೀಕೃತಿ ಸಿಬ್ಬಂದಿ ನಮೂದುಗಳನ್ನು ಮಾಡತಕ್ಕದ್ದು ಮತ್ತು ಅದನ್ನು ಅಧ್ಯಕ್ಷರಿಗೆ ಸಲ್ಲಿಸುವುದು. ಸಾಕಷ್ಟು ಸಂಖ್ಯೆಯ ಪ್ರತಿಗಳನ್ನು ಸ್ವೀಕರಿಸಿದರೆ, ಅದನ್ನು ಸದಸ್ಯರಿಗೆ ಸಹ ಸಲ್ಲಿಸವುದು. ಸ್ವೀಕೃತಿ ರಿಜಿಸ್ಟರ್ ನಮೂನೆ–I ರಲ್ಲಿರತಕ್ಕದ್ದು.

(3) ಒಳಬರುವ ಎಲ್ಲ ಪತ್ರಗಳನ್ನು ಕ್ಯಾಲೆಂಡರ್ ವರ್ಷದಲ್ಲಿ ಬರುವ ಕ್ರಮ ಸಂಖ್ಯೆಯೊಂದಿಗೆ ಸ್ವೀಕೃತಿ ರಿಜಿಸ್ಟರ್‌ನಲ್ಲಿ ನಮೂದಿಸಲಾಗುವುದು. ಹೊಸ ಕ್ರಮ ಸಂಖ್ಯೆಗಳನ್ನು ಮುಂದಿನ ವರ್ಷ ಪ್ರಾರಂಭಿಸಲಾಗುವುದು. ಸಂಖ್ಯೆಯನ್ನು ಕೆಎಸ್‌ಪಿಸಿಎ/ಐಎನ್‌ಡಬ್ಲ್ಯೂ/1/2014 ಮತ್ತು ಹಾಗೆ ಎಂದು ಸೂಚಿಸಲಾಗುವುದು. ಆ ದಿನ ನಮೂದು ಪ್ರಾರಂಭವಾಗುವ ಮುಂಚೆ, ದಿನಾಂಕವನ್ನು ಇಷ್ಟವಾಗುವ ಕೆಂಪು ಶಾಹಿಯಲ್ಲಿ ನಮೂದಿಸುವುದು ಮತ್ತು ಅಡಿಗೆರೆ ಹಾಕಬೇಕು, ಎಲ್ಲಾ ಇತರ ನಮೂದುಗಳನ್ನು ನೀಲಿಶಾಹಿಯಲ್ಲಿ ಬರೆಯಬೇಕು. ದಿನದ ಎಲ್ಲಾ ನಮೂದುಗಳು ಮುಗಿದ ನಂತರ, ಮುಂದಿನ ದಿನಾಂಕವನ್ನು ಮುಂದಿನ ಸಾಲಿನಲ್ಲಿ ನಮೂದಿಸಲಾಗುವುದು ಮತ್ತು ಆ ನಂತರ ದಿನದ ಮೊದಲ ನಮೂದನ್ನು ಮುಂದಿನ ಕ್ರಮ ಸಂಖ್ಯೆಯೊಂದಿಗೆ ಮತ್ತು ಹಾಗೆ ನಮೂದಿಸಲಾಗುವುದು.

(4) ಆ ಹೆಸರಿನಿಂದ ಸ್ವೀಕರಿಸಿದ ಪತ್ರಗಳನ್ನು ವಿಳಾಸದಾರನು ಸ್ವೀಕರಿಸಿದ ನಂತರ ಮತ್ತು ಅಧ್ಯಕ್ಷರು ತಮಗೆ ಸಲ್ಲಿಸಿದ ಪತ್ರಗಳನ್ನು ನೋಡಿದ ನಂತರ, ದೂರುಗಳು ಮತ್ತು ದೂರುಗಳೊಂದಿಗೆ ಸಂಬಂಧಿಸಿದ ಪತ್ರಗಳನ್ನು ಸ್ವೀಕರಿಸಿದ ತರುವಾಯ ಅವುಗಳನ್ನು ದೂರುಗಳ ವಿಭಾಗಕ್ಕೆ ಕಳುಹಿಸತಕ್ಕದ್ದು. ಎಲ್ಲ ಇತರ ಪತ್ರಗಳನ್ನು ಸಾಮಾನ್ಯ ವಿಭಾಗಕ್ಕೆ ವರ್ಗಾಯಿಸತಕ್ಕದ್ದು. ವಿಳಾಸದಾರ ಅಥವಾ ಸಂದರ್ಭಾನುಸಾರ ಅಧ್ಯಕ್ಷರು ನೀಡಿದ ಸೂಚನೆಗಳು ಯಾವುದಾದರೂ ಇದ್ದರೆ ಕಛೇರಿಯ ಸಂಬಂಧಪಟ್ಟ ಶಾಖೆಯು ಪಾಲಿಸತಕ್ಕದ್ದು.

(5) ಅಧ್ಯಕ್ಷರು ದೂರುಗಳನ್ನು ನೋಡಿದ ನಂತರ ದೂರುಗಳ ಶಾಖೆಯ ದೂರುಗಳ ಪ್ರಕರಣ ರಿಜಿಸ್ಟರ್ ನಲ್ಲಿ ಕ್ರಮ ಸಂಖ್ಯೆಯನುಸಾರ ನಮೂದಿಸತಕ್ಕದ್ದು. ಪ್ರತಿಯೊಂದು ದೂರನ್ನು ಪ್ರತ್ಯೇಕವಾಗಿ ಪ್ರಕರಣ ಕಡತದಲ್ಲಿ ನಿರ್ವಹಿಸತಕ್ಕದ್ದು. ಪ್ರತಿಯೊಂದು ದೂರಿನ ಪ್ರಕರಣ ಸಂಖ್ಯೆಯು ಗುರುತು ಸೂಚ್ಯಾಂಕ ಸಿಎಂಪಿ ಯೊಂದಿಗೆ ಕ್ಯಾಲೆಂಡರ್ ವರ್ಷ ಮತ್ತು ಕ್ರಮ ಸಂಖ್ಯೆ ಯನ್ನು ಹೊಂದಿರತಕ್ಕದ್ದು. ಉದಾಹರಣೆಗೆ 2014ನೇ ಸಾಲಿನಲ್ಲಿ ಸ್ವೀಕರಿಸಿದ ಮೊದಲನೇ ದೂರಿನ ಪ್ರಕರಣ ಸಂಖ್ಯೆ: ಸಿಎಂಪಿ 1/2014 ಮತ್ತು 2015 ನೇ ಸಾಲಿನಲ್ಲಿ ಸ್ವೀಕರಿಸಿದ ಮೊದಲನೇ ದೂರಿನ ಪ್ರಕರಣ ಸಂಖ್ಯೆ: ಸಿಎಂಪಿ 1/2015 ಮತ್ತು ಕಡತ ಸಂಖ್ಯೆ ಅನುಕ್ರಮವಾಗಿ ಕೆಎಸ್‌ಪಿಸಿಎ 1 ಸಿಎಂಪಿ 2014 ಮತ್ತು ಕೆಎಸ್‌ಪಿಸಿಎ 1 ಸಿಎಂಪಿ 2015 ಇರುವುದು. ಪ್ರತಿಯೊಂದು ದೂರಿನ ಪ್ರಕರಣ ಸಂಖ್ಯೆಯನ್ನು ದೂರಿನ ಬಲಗಡೆ ಮೇಲ್ಭಾಗದಲ್ಲಿ ಕೆಂಪು ಶಾಹಿಯಲ್ಲಿ ಮತ್ತು ಕಡತ ಸಂಖ್ಯೆಯನ್ನು ಕಡತದ ಮುಖಪುಟದ ಮೇಲೆ ಕೆಂಪು ಶಾಹಿಯಲ್ಲಿ ನಮೂದಿಸುವುದು. ಒಂದು ದೂರಿನ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರ ಅದಕ್ಕೆ ಸಂಬಂಧಪಟ್ಟ ಕಡತದಲ್ಲಿಯೇ ಅದೇ ದೂರಿನ ಪ್ರಕರಣ ಸಂಖ್ಯೆಯೊಂದಿಗೆ ನಿರ್ವಹಿಸುವುದು. ದೂರುಗಳ ಪ್ರಕರಣ ರಿಜಿಸ್ಟರ್ ನಮೂನೆ–II ರಲ್ಲಿರತಕ್ಕದ್ದು.

(6) ಸಾಮಾನ್ಯ ಶಾಖೆಯು (ಅ) ಮಾಹಿತಿ ಹಕ್ಕು ಕಾಯ್ದೆ, 2005 ಕ್ಕೆ ಸಂಬಂಧಪಟ್ಟ ಆರ್.ಟಿ.ಐ ಪ್ರಕರಣ ರಿಜಿಸ್ಟರ್; (ಆ)ವಿಧಾನ ಸಭೆ, ವಿಧಾನ ಪರಿಷತ್ ಹಾಗೂ ಸಂಸತ್ತಿನ ಪ್ರಶ್ನೆಗಳಿಗೆ ಸಂಬಂಧಪಟ್ಟ ವಿಧಾನ ಮಂಡಲ ಪ್ರಶ್ನೆಗಳ ಪ್ರಕರಣ ರಿಜಿಸ್ಟರ್ (ಇ) ಸಿಬ್ಬಂದಿ ಮತ್ತು ಸೇವಾ ವಿಷಯಗಳಿಗೆ ಸಂಬಂಧಪಟ್ಟ ಸಿಬ್ಬಂದಿ ಪ್ರಕರಣ ರಿಜಿಸ್ಟರ್ (ಈ) ಲೆಕ್ಕ ವಿಷಯಗಳಿಗೆ ಸಂಬಂಧಪಟ್ಟ ಲೆಕ್ಕ ಪ್ರಕರಣ ರಿಜಿಸ್ಟರ್ ಮತ್ತು (ಉ) ಯಾವುದೋ ರಿಜಿಸ್ಟರ್‌ನಲ್ಲಿ ಬರದಿರುವ ವಿಷಯಗಳಿಗೆ ಸಂಬಂಧಪಟ್ಟ ವಿವಿಧ ಪ್ರಕರಣ ರಿಜಿಸ್ಟರ್ ನ್ನು ನಿರ್ವಹಿಸತಕ್ಕದ್ದು. ಮೇಲೆ ತಿಳಿಸಿರುವ ವರ್ಗಗಳಿಗೆ ಅನ್ವಯವಾಗುವ ಪತ್ರ ವ್ಯವಹಾರವನ್ನು ಪ್ರತಿಯೊಂದು ವಿಷಯಕ್ಕೆ ಒಂದು ಪ್ರಕರಣ ಸಂಖ್ಯೆಯೊಂದಿಗೆ ಸಂಬಂಧಪಟ್ಟ ಪ್ರಕರಣ ರಿಜಿಸ್ಟರ್‌ನಲ್ಲಿ ನಮೂದಿಸುವುದು. ಒಂದು ವಿಷಯದ ಮೇಲೆ ಅದೇ ಪ್ರಕರಣದಲ್ಲಿ ಎಲ್ಲಾ ತರುವಾಯದ ಪತ್ರ ವ್ಯವಹಾರಗಳನ್ನು ಅದಕ್ಕೆ ಸಂಬಂಧಪಟ್ಟ ಕಡತದಲ್ಲಿಯೇ ವ್ಯವಹರಿಸತಕ್ಕದ್ದು, ಇದು ಟಿಪ್ಪಣಿ ಇರುವ ಕಡೆ ಮತ್ತು ಪತ್ರ ವ್ಯವಹಾರದ ಕಡೆಯನ್ನು ಹೊಂದಿರತಕ್ಕದ್ದು. ಕಡತ ಸಂಖ್ಯೆ ಕೆಎಸ್‌ಪಿಸಿಎ 1 ಆರ್‌ಟಿಐ 2015, ಕೆಎಸ್‌ಪಿಸಿಎ 1

ಎಲ್‌ಪಿಕ್ಯೂ 2015, ಕೆಎಸ್‌ಪಿಸಿಎ 1 ಇಎಸ್‌ಟಿ 2015, ಕೆಎಸ್‌ಪಿಸಿಎ 1 ಎಸಿಟಿ 2015, ಕೆಎಸ್‌ಪಿಸಿಎ 1 ಎಂಎಸ್‌ಸಿ 2015 ಮತ್ತು ಹಾಗೆಯೇ ವಿಧಗಳಂತೆ ಕಡತದ ಮುಖಪುಟದ ಮೇಲೆ ನಮೂದಿಸಲಾಗುವುದು.

(7) ಪ್ರಾಧಿಕಾರದಿಂದ ರವಾನೆಯಾಗುವ ಎಲ್ಲಾ ಪತ್ರಗಳನ್ನು ಸಾಮಾನ್ಯ ಶಾಖೆಯಲ್ಲಿ ಈ ಕೆಲಸಕ್ಕೆ ವಹಿಸಿದ ಸಿಬ್ಬಂಧಿ ಮೂಲಕ ರವಾನಿಸತಕ್ಕದ್ದು, ಆತನನ್ನು ರವಾನೆ ವಿಲೇವಾರಿ ಸಿಬ್ಬಂದಿ ಎಂದು ಕರೆಯತಕ್ಕದ್ದು. ರವಾನಿಸುವ ಎಲ್ಲ ಪತ್ರ ವ್ಯವಹಾರಗಳನ್ನು, ಕ್ಯಾಲೆಂಡರ್ ವರ್ಷದಲ್ಲಿ ಚಾಲ್ತಿ ಕ್ರಮ ಸಂಖ್ಯೆಗಳೊಂದಿಗೆ ರವಾನೆ ರಿಜಿಸ್ಟರಿನಲ್ಲಿ ಆತನು ದಿನಚರಿ ಬರೆಯತಕ್ಕದ್ದು. ಹೊಸ ಕ್ರಮ ಸಂಖ್ಯೆಗಳು ಮುಂದಿನ ವರ್ಷ ಪ್ರಾರಂಭವಾಗತಕ್ಕದ್ದು. ರವಾನಿಸುವ ಪತ್ರ ವ್ಯವಹಾರದ ಕಚೇರಿ ಪ್ರತಿಯನ್ನು ತೋರಿಸಬೇಕಾದ ಸಂಖ್ಯೆಯನ್ನು ಕೆಎಸ್‌ಪಿಸಿಎ/ಓಯುಟಿಡಬ್ಲ್ಯೂ/1/2014 ಮತ್ತು ಹಾಗೆಂದು ಸೂಚಿಸಲಾಗುವುದು. ಆ ದಿನ ನಮೂದುಗಳು ಪ್ರಾರಂಭವಾಗುವ ಮುಂಚೆ, ಆ ದಿನಾಂಕವನ್ನು, ಕೆಂಪು ಶಾಯಿಯಲ್ಲಿ ಮತ್ತು ಅಡಿಗೆರೆ ಹಾಕಿ ನಮೂದಿಸಬೇಕು. ಎಲ್ಲ ಇತರ ನಮೂದುಗಳನ್ನು ನೀಲಿ ಶಾಯಿಯಲ್ಲಿ ಬರೆಯಬೇಕು. ದಿನದ ಎಲ್ಲ ನಮೂದುಗಳು ಮುಗಿದ ನಂತರ, ಮುಂದಿನ ದಿನಾಂಕವನ್ನು ಮುಂದಿನ ಸಾಲಿನಲ್ಲಿ ನಮೂದಿಸಬೇಕು ಮತ್ತು ಆ ಮುಂದಿನ ದಿನದ ಮೊದಲ ನಮೂದು, ಮುಂದಿನ ಕ್ರಮ ಸಂಖ್ಯೆಯೊಂದಿಗೆ ಮತ್ತು ಹಾಗೆಂದು ನಮೂದಿಸುವುದು. ರವಾನೆ ರಿಜಿಸ್ಟರು ನಮೂನೆ–III ರಲ್ಲಿರತಕ್ಕದ್ದು.

## ಅಧ್ಯಾಯ– II

## ದೂರುಗಳು/ಸ್ವಪ್ರೇರಣೆಯ ಕ್ರಮದೊಂದಿಗೆ ವ್ಯವಹರಿಸುವ ಕಾರ್ಯವಿಧಾನ

4. **ಸಾಮಾನ್ಯ:** (1) ದೂರುಗಳನ್ನು ಕನ್ನಡ ಅಥವಾ ಇಂಗ್ಲೀಷಿನಲ್ಲಿ ಪ್ರಾಧಿಕಾರಕ್ಕೆ ಸಲ್ಲಿಸಬಹುದು. ಆದಾಗ್ಯೂ, ಅದರ ವಿವೇಚನಾನುಸಾರವಾಗಿ ಇತರ ಭಾಷೆಗಳಲ್ಲಿರುವ ದೂರುಗಳನ್ನು ಸಹ ಸ್ವೀಕರಿಸಬಹುದು.

(2) ಪ್ರಾಧಿಕಾರಕ್ಕೆ ಸಲ್ಲಿಸಿದ ದೂರುಗಳ ಮೇಲೆ ಶುಲ್ಕವನ್ನು ವಿಧಿಸತಕ್ಕದ್ದಲ್ಲ.

(3) ಪ್ರತಿಯೊಂದು ದೂರಿನಲ್ಲಿ ದೂರದಾರನ ಹೆಸರು, ಪೂರ್ಣ ಅಂಚೆ ವಿಳಾಸ ಮತ್ತು ಯಾವುದಾದರೂ ದೂರವಾಣಿ ಸಂಖ್ಯೆ ಇದ್ದರೆ ನಿರ್ದಿಷ್ಟಪಡಿಸಿತಕ್ಕದ್ದು ಮತ್ತು ದೂರದಾರ ಯಾವ ಪೊಲೀಸು ಅಧಿಕಾರಿಗಳ ವಿರುದ್ಧ ದೂರು ಸಲ್ಲಿಸಲಾಗಿದೆಯೋ ಅವರ ಪೂರ್ಣ ಗುರುತನ್ನು ನಿರ್ದಿಷ್ಟಪಡಿಸತಕ್ಕದ್ದು.

(4) ಅದು ಅವಶ್ಯಕವೆಂದು ಪರಿಗಣಿಸಿದರೆ, ಪ್ರಾಧಿಕಾರವು, ಅದರ ವಿವೇಚನಾನುಸಾರವಾಗಿ ಸೂಕ್ತವೆಂದು ಭಾವಿಸುವಂಥ ರೀತಿಯಲ್ಲಿ ದೂರುದಾರನ ಗುರುತನ್ನು ಪರಿಶೀಲಿಸಬಹುದು.

(5) ದೂರು, ದೂರುದಾರನ ಸಹಿಯನ್ನು ಹೊಂದಿರಬೇಕು. ದೂರುದಾರನು ಸಹಿ ಮಾಡದಿದ್ದರೆ ದೂರುದಾರನು ಅವನ ಪರವಾಗಿ ದೂರನ್ನು ಸಿದ್ಧಪಡಿಸಿರುವಂಥ ವ್ಯಕ್ತಿಯಿಂದ ಯುಕ್ತವಾಗಿ ದೃಢೀಕರಿಸಿದ ಆತನ ಎಡಗೈ ಹೆಬ್ಬೆಟ್ಟಿನ ಗುರುತನ್ನು ಹಾಕಿಸತಕ್ಕದ್ದು. ಅಂಥ ವ್ಯಕ್ತಿಯು ಈಗಾಗಲೇ ಅಂಥ ಮಾಹಿತಿಯನ್ನು ನೀಡದಿದ್ದರೆ ಪ್ರಾಧಿಕಾರವು, ಅದರ ವಿವೇಚನಾನುಸಾರ ಹೆಸರು ಮತ್ತು ವಿಳಾಸವನ್ನು ಕೇಳಬಹುದು.

(6) ದೂರಿಗೆ ಸಂಬಂಧಿಸಿದಂತೆ ವಿಷಯದ ಸಂಪೂರ್ಣ ಚಿತ್ರವನ್ನು ದೂರು ತಿಳಿಯಪಡಿಸತಕ್ಕದ್ದು.

(7) ದೂರು ಮತ್ತು ಲಗತ್ತಿಸಲಾದ ದಸ್ತಾವೇಜುಗಳಿಗೆ ಪುಟ ಸಂಖ್ಯೆಯನ್ನು ಹಾಕಬೇಕು ಮತ್ತು ವಿಷಯ ಸೂಚಿಯನ್ನು ಲಗತ್ತಿಸಬೇಕು.

(8) ಛಾಯಾ ಚಿತ್ರದ ಸೌಲಭ್ಯ ಹೊಂದಿರುವ ಕಚೇರಿಯು ದೂರನ್ನು ಕಳುಹಿಸಿದ್ದರೆ, ದೂರಿನ ಐದು ಪ್ರತಿಗಳನ್ನು ಮತ್ತು ಅದರ ಲಗತ್ತುಗಳನ್ನು ಕಳುಹಿಸತಕ್ಕದ್ದು. ದೂರುದಾರನು ದೂರಿನ ಮತ್ತು ಅದರ ಲಗತ್ತುಗಳ ಐದು ಪ್ರತಿಗಳನ್ನು ಒದಗಿಸಲು ಸಾಧ್ಯವಿದ್ದಲ್ಲಿ ಆ ರೀತಿ ಕಳುಹಿಸಲು ಅವಕಾಶ ಹೊಂದಿರುತ್ತಾನೆ.

(9) ಪ್ರಾಧಿಕಾರವು, ಅದು ಅವಶ್ಯಕವೆಂದು ಪರಿಗಣಿಸಿರಬಹುದಾದಂತೆ ಹೆಚ್ಚಿನ ಮಾಹಿತಿ, ದಸ್ತಾವೇಜುಗಳು, ಅಫಿಡವಿಟ್ ಮೊದಲಾದವುಗಳನ್ನು ಕೋರಬಹುದು.

5. **ದೂರುಗಳಿಗೆ ಸಂಬಂಧಿಸಿದ ಕಾರ್ಯವಿಧಾನ:–** (1) ದೂರನ್ನು, ದೂರುಗಳ ಪ್ರಕರಣ ರಿಜಿಸ್ಟರಿನಲ್ಲಿ ನಮೂದಿಸಿದ ತರುವಾಯ, ದೂರುಗಳ ಶಾಖೆಯು ಪ್ರಕರಣ ಕಡತವನ್ನು ಪ್ರಾರಂಭಿಸತಕ್ಕದ್ದು ಮತ್ತು IVನೇ ನಮೂನೆಯಲ್ಲಿ

ಮೂಲ ವಿವರಗಳ ಪಟ್ಟಿಯನ್ನು ತಯಾರಿಸತಕ್ಕದ್ದು ಮತ್ತು ನಮೂನೆ V ರಲ್ಲಿ ಪತ್ರದ ಹಾಳೆಯಲ್ಲಿ ಪ್ರಾರಂಭಿಸತಕ್ಕದ್ದು. ಈ ಹಾಳೆಯಲ್ಲಿ ಮೊದಲ ನಮೂದು ದೂರುಗಳ ಸ್ವೀಕೃತಿಯನ್ನು ತೋರಿಸುವುದು. ತರುವಾಯ ಎಲ್ಲಾ ರವಾನೆ ಮತ್ತು ಸ್ವೀಕೃತಿ ಪತ್ರ ವ್ಯವಹಾರಗಳನ್ನು ಕಳುಹಿಸುವಾಗ ಅಥವಾ ಸ್ವೀಕರಿಸುವಾಗ ಈ ಹಾಳೆಯಲ್ಲಿ ತೋರಿಸಲಾಗುವುದು.

(2) ಯಾರೊಬ್ಬ ಸದಸ್ಯರು ನೇರವಾಗಿ ದೂರನ್ನು ಸ್ವೀಕರಿಸಿದ್ದಲ್ಲಿ, ಅದನ್ನು ಸ್ವೀಕೃತಿ ರಿಜಿಸ್ಟರ್‌ನಲ್ಲಿ ದಾಖಲಿಸಲು ಸ್ವೀಕೃತಿ ಪ್ರಾಪ್ತಿ ಸಿಬ್ಬಂದಿಗೆ ವರ್ಗಾಯಿಸಲಾಗುವುದು ಮತ್ತು ಅಧ್ಯಕ್ಷರ ಮುಂದೆ ಇಡಲಾಗುವುದು. ತದನಂತರ, ಅದನ್ನು ಕಲಂ 3(4) ಮತ್ತು ತದನಂತರ ಬರುವ ಕಲಂಗಳಂತೆ ನಿರ್ವಹಿಸುವುದು.

(3) ಪ್ರಕರಣ ಕಡತ ಪ್ರಾರಂಭಿಸುವಾಗ ಮತ್ತು IV ಮತ್ತು V ನೇ ನಮೂನೆಗಳನ್ನು ತಯಾರಿಸುವಾಗ ನ್ಯೂನ್ಯತೆಗಳು ದೂರು ವಿಭಾಗಕ್ಕೆ ಕಂಡುಬಂದಾಗ,(i) ನ್ಯೂನ್ಯತೆಗಳು ಸಣ್ಣಪ್ರಮಾಣದೆಂದು ಕಡೆಗಣಿಸುವುದಾಗಲಿ ಅಥವಾ (ii) ನ್ಯೂನ್ಯತೆಗಳನ್ನು ಕಛೇರಿಯ ಮೂಲಕ ಸರಿಪಡಿಸುವಾಗ ಅಥವಾ (iii) ದೂರನ್ನು ನೀಡಿದವರಿಂದ ನ್ಯೂನ್ಯತೆಗಳನ್ನು ಸರಿಪಡಿಸುವಾಗ ಆಗಲಿ ಅಥವಾ (iv) ನ್ಯೂನತೆಗಳನ್ನು ಪ್ರಾಧಿಕಾರವು ಅವಶ್ಯಕವಾಗಿ ಪರೀಕ್ಷಿಸಬೇಕು ಎಂಬುದನ್ನು ತೀರ್ಮಾನಿಸಲು ಅಧ್ಯಕ್ಷರಿಗೆ ವಿಷಯವನ್ನು ಸಲ್ಲಿಸತಕ್ಕದ್ದು.

(4) ಅದರ ಲಗತ್ತುಗಳೊಂದಿಗೆ ದೂರಿನ ಸೂಚಿಯನ್ನು ಪ್ರಾಧಿಕಾರಕ್ಕೆ ದೂರನ್ನು ಕಳುಹಿಸುವವರು ಒದಗಿಸದಿದ್ದರೆ, ಅಧ್ಯಕ್ಷರು, ತನ್ನ ವಿವೇಚನಾನುಸಾರ ಈ ಅಗತ್ಯಗಳನ್ನು ಬಿಟ್ಟುಬಿಡಬಹುದು ಮತ್ತು ಇಂತಹ ಪರಿಸ್ಥಿತಿಯಲ್ಲಿ ದೂರು ವಿಭಾಗವು ನಮೂನೆ-- VI ರಲ್ಲಿ ಸೂಚಿಯನ್ನು ತಯಾರಿಸತಕ್ಕದ್ದು.

(5) ಕನ್ನಡ ಅಥವಾ ಇಂಗ್ಲೀಷ್ ಬಾಷೆಯಲ್ಲಿ ಇಲ್ಲದಿರುವ ದೂರುಗಳನ್ನು ತ್ವರಿತವಾಗಿ ಇಂಗ್ಲೀಷ್ ಅಥವಾ ಕನ್ನಡ ಭಾಷೆಗೆ ತರ್ಜುಮೆ ಮಾಡಲು ದೂರುಗಳ ವಿಭಾಗವು ಖಚಿತಪಡಿಸುವುದು.

6. **ಪ್ರಾಧಿಕಾರದ ಮುಂದೆ ದೂರುಗಳ ಕಡತಗಳನ್ನು ಮಂಡಿಸುವುದು:** (1) ದೂರುಗಳ ವಿಭಾಗ ಅಧ್ಯಕ್ಷರವರ ಆದೇಶದಂತೆ ಪ್ರಾಧಿಕಾರದ ಮುಂದೆ ಮಂಡಿಸಬೇಕಾದ ದೂರುಗಳ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ದೂರುಗಳ ಪಟ್ಟಿಯೊಂದಿಗೆ ಪ್ರಕರಣಗಳ ಕಡತಗಳನ್ನು ಪ್ರಾಧಿಕಾರದ ಮುಂಬರುವ ಸಭೆಯಲ್ಲಿಡುವುದು.

(2) ತುರ್ತು ಸನ್ನಿವೇಶದಲ್ಲಿ ಅಥವಾ ಬೇರೆ ಯಾವುದೋ ಕಾರಣದಿಂದ, ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಅಧ್ಯಕ್ಷರು ಕಡತವನ್ನು ಸದಸ್ಯರ ಅಭಿಪ್ರಾಯಕ್ಕಾಗಿ ಕಳುಹಿಸಬೇಕೆಂದು ಆದೇಶಿಸಬಹುದು. ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಸದಸ್ಯರು ಒಪ್ಪಿದ್ದಲ್ಲಿ, ಇದನ್ನು ಪ್ರಾಧಿಕಾರದ ಠರಾವು ಎಂದು ಪರಿಗಣಿಸಲಾಗುವುದು. ಆದಾಗ್ಯೂ, ಯಾರಾದರೂ ಸದಸ್ಯರು ಅದನ್ನು ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಬೇಕೆಂದು ಸಲಹೆ ನೀಡಿದ್ದಲ್ಲಿ, ಆ ವಿಷಯವನ್ನು ಮುಂಬರುವ ಸಭೆಯಲ್ಲಿ ಮಂಡಿಸಲಾಗುವುದು ಅಥವಾ ತುರ್ತು ಸನ್ನಿವೇಶದಲ್ಲಿ ಜರೂರಾಗಿ ಸಭೆಯನ್ನು ಕರೆಯಲಾಗುವುದು.

